


## ದೈವಭಕ್ತಿ ಜತೆ ಕರ್ತವ್ಯ ಪ್ರಜ್ಞೆ

ಬೆಳಗಿನ 6 ಗಂಟೆಯಿಂದ 9 ಗಂಟೆಯವರೆಗೆ ಯಾವ ಚಾನೆಲ್ ತಿರುಗಿಸಿದರೂ ಭಕ್ತಿಯ ಮಹಾಪೂರವೇ ಹರಿಯುತ್ತಿರುತ್ತದೆ! ಅಂದರೆ ದೇಗುಲಗಳ ದರ್ಶನ, ಭಕ್ತಿ ಗೀತೆಗಳು, ಪ್ರವಚನಗಳು, ಜ್ಯೋತಿಷ್ಯ ಇತ್ಯಾದಿ.

ದೈವಭಕ್ತಿಯನ್ನು ಹೆಚ್ಚಿಸಲು ಟಿ.ವಿ. ವಾಹಿನಿಗಳು ಸತತ ಪ್ರಯತ್ನಿಸುತ್ತಾ ಬಂದಿರುವುದು ಇದರಿಂದ ತಿಳಿಯುತ್ತಿದೆ.

ಆದರೆ ರಾಷ್ಟ್ರ ಪ್ರೇಮ, ಸಮಾಜ ನಿಷ್ಠೆ, ಕರ್ತವ್ಯಪ್ರಜ್ಞೆ ಬಗ್ಗೆ ಯಾರು ಕಣ್ಣು ಹಾಯಿಸುತ್ತಿಲ್ಲ. ಬೆಳಗಿನ ಉತ್ಸಾಹದ ಉಲ್ಲಾಸದ ಮನಸ್ಸಿಗೆ ಮುದ ನೀಡುವ, ಚೈತನ್ಯ ಕೊಡುವ ಗೀತೆಗಳ ಪ್ರಸಾರ ಹೆಚ್ಚಾಗಬೇಕಿದೆ. ಮೂಲಭೂತ ಕರ್ತವ್ಯಗಳ ಬಗ್ಗೆ ಉಪನ್ಯಾಸ, ಪ್ರವಚನಗಳು ಬೇಕು. ವ್ಯಕ್ತಿಯಾಗಿ ಸಮಾಜಕ್ಕೆ ಏನು ಕಾಣಿಕೆ ನೀಡಬೇಕು. ಅನ್ಯಾಯದ ವಿರುದ್ಧ ಹೇಗೆ ಸೆಟೆದು ನಿಲ್ಲಬೇಕೆಂಬ ಕಿಚ್ಚನ್ನು ಹೆಚ್ಚಿಸುವಂತಹ ಮಾತುಗಳ ಅಗತ್ಯವೂ ಇದೆ. ದೈವಭಕ್ತಿಯ ಜತೆಗೆ ಇವೆಲ್ಲ ಬೇಕಾಗಿದೆ.

-ವೀಣಾ ಶಂಕರ್, ದಾವಣಗೆರೆ

## ಮಕ್ಕಳ ಕ್ವಿಜ್ ಏಕಿಲ್ಲ?

ಕನ್ನಡ ಟಿ.ವಿ. ಚಾನೆಲ್‌ಗಳಲ್ಲಿ ಕ್ವಿಜ್ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಆದರೆ ಬರೀ ಡ್ಯಾನ್ಸ್, ಮೆಗಾ ಧಾರಾವಾಹಿಗಳೇ ಜೀವಾಳವಾಗಿವೆ. ಕೌನ್ ಬನೇಗಾ ಕರೋಡ್ ಪತಿಯಂತಹ ದೊಡ್ಡ ಬಜೆಟ್‌ನ ಕ್ವಿಜ್ ಕನ್ನಡದಲ್ಲೂ ಬಂದರೆಷ್ಟು ಚೆನ್ನ. ಮಕ್ಕಳ ಕ್ವಿಜ್ ಕಾರ್ಯಕ್ರಮ ಏಕಿಲ್ಲ? ಮಕ್ಕಳಿಗಾಗೇ ಕ್ವಿಜ್ ಇದ್ದರೆ, ಅವರಲ್ಲೂ ಕಲಿಯುವ, ಭಾಗವಹಿಸುವ ಹುಮ್ಮಸ್ಸು ಬೆಳೆಯುತ್ತದೆ. ಜೊತೆಗೆ ಅವರ ಜ್ಞಾನವೂ ಅಭಿವೃದ್ಧಿ ಹೊಂದುತ್ತದೆ.

-ಮೈಸೂರು ಕುಸುಮ, ಶ್ರವಣಬೆಳಗೊಳ

---

**ಪ್ರತಿಕ್ರಿಯೆ**

## ಸರ್ಕಾರದ ನಿಯಂತ್ರಣ ಅವಶ್ಯ

ಖಾಸಗಿ ಟಿವಿ ಚಾನೆಲ್‌ಗಳು ಬೆಳಗಿನ 7ಗಂಟೆಯಿಂದ 10ಗಂಟೆವರೆಗೆ ಪೂಜಾವಿಧಿ, ಜ್ಯೋತಿಷ್ಯಶಾಸ್ತ್ರ, ವಿವಿಧ ದೇವ– ದೇವತೆಗಳ ದರ್ಶನ, ಭವಿಷ್ಯ ಹೇಳುವುದರ ಮುಖಾಂತರ ಸಾರ್ವಜನಿಕರನ್ನು ಹೇಗಾದರೂ ಹಿಡಿದಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿವೆ. ಬೆಳಗಿನ ಸಮಯ ಬಂಗಾರದಂತಹ ಸಮಯ. ಆ ಹೊತ್ತಿನಲ್ಲಿ ಗೃಹಿಣಿಯರು ವಿರಾಮವಾಗಿ ಕುಳಿತು ಇವನ್ನೆಲ್ಲ ನೋಡುವುದು ಸಾಧ್ಯವಿಲ್ಲ. ಆದರೆ ಈ ಹೊತ್ತಿನಲ್ಲೂ ಅವರನ್ನು ಬಿಡುವುದು ಬೇಡ. ಹೇಗಾದರೂ ಸರಿ, ಒಟ್ಟಿನಲ್ಲಿ ಟಿಆರ್‌ಪಿ ಹೆಚ್ಚಾದರೆ ಸಾಕು ಎನ್ನುವ ಟಿವಿಗಳ ಭ್ರಷ್ಟ ಪ್ರವೃತ್ತಿಗೆ ಕಡಿವಾಣ ಹಾಕಬೇಕು. ಸರ್ಕಾರದ ನಿಯಂತ್ರಣ ಬೇಕು.

-ಆರ್.ಕೆ.ಹಾದಿಮನಿ, ಧಾರವಾಡ

## ಬಡವರಿಗೆ ಪ್ರಯೋಜನ

ಕಸ್ತೂರಿ ಕನ್ನಡವಾಹಿನಿಯಲ್ಲಿ ಇತ್ತೀಚೆಗೆ ಆಯುಷ್ಮಾನುಭವ ಕಾರ್ಯಕ್ರಮ ಉತ್ತಮವಾಗಿ ಮೂಡಿಬರುತ್ತಿದೆ. ಅದರಿಂದ ಕೆಲ ಬಡವರಿಗೆ ಪ್ರಯೋಜನವಾಗುತ್ತದೆ. ಇಂತಹ ಅನುಕೂಲಕರವಾದ ಕಾರ್ಯಕ್ರಮ ನಡೆಸಿಕೊಡುವ ಶೈಲಜಾ ಅವರ ಸಂದರ್ಶನವೂ ಚೆನ್ನಾಗಿದೆ.

- ಬಿ.ಎಸ್.ಮುಳ್ಳೂರ, ಹಲಗತ್ತಿ, ರಾಮದುರ್ಗ

## ಹಳ್ಳಿ ಹೈದನಿಗೆ ಏಕವಚನ!

'ಹಳ್ಳಿ ಹೈದ ಪ್ಯಾಟೆಗೆ ಬಂದ' ಕಾರ್ಯಕ್ರಮದಲ್ಲಿ ನಿರೂಪಕರು ಮತ್ತು ನಿರ್ಣಾಯಕರು ಹಳ್ಳಿ ಹೈದರನ್ನು ಏಕವಚನದಲ್ಲಿ ಸಂಬೋಧಿಸುತ್ತಾರೆ. ಇದು ಹಳ್ಳಿ ಹೈದನಿಗೆ ನಗರದಲ್ಲಿ ಸಿಗುವ ಗೌರವ(?)ದ ಇನ್ನೊಂದು ನಿದರ್ಶನ. ಮಕ್ಕಳನ್ನೂ ಬಹುವಚನದಲ್ಲಿ ಕರೆಯುವ ಉದಾಹರಣೆಗಳು ಇವೆ. ಆದರೆ ಮಕ್ಕಳಿಗೆ ಸಿಗುವ ಗೌರವ ಮತ್ತು ಮನ್ನಣೆ ಹಳ್ಳಿ ಹೈದನಿಗೆ ಸಿಗದಿರುವುದು ಆಶ್ಚರ್ಯ.

-ರಮಾನಂದ ಶರ್ಮಾ, ಬೆಂಗಳೂರು

## ತಪ್ಪಿಗೂ ಬಹುಮಾನವೇ?

ಉದಯ ವಾಹಿನಿಯ 'ಗೆಲ್ಲಮ್ಮ ಗೆಲ್ಲಿ' ಕಾರ್ಯಕ್ರಮದ ಇತ್ತೀಚಿನ ಒಂದು ಸಂಚಿಕೆಯಲ್ಲಿ ಕರೆ ಮಾಡಿದ ಮಹಿಳೆಗೆ 'ನಾಗರಹಾವು' ಚಿತ್ರದ ಒಂದು ಹಾಡಿನ ತುಣುಕು ತೋರಿಸಿ ನಂತರ ಕೇಳಿದ ಪ್ರಶ್ನೆ ಹೀಗಿತ್ತು. 'ನಾಗರಹಾವು ವಿಷ್ಣುವರ್ಧನ್ ಅಭಿನಯದ ಎಷ್ಟನೇ ಚಿತ್ರ?' ಕರೆ ಮಾಡಿದ ಮಹಿಳೆ 'ಮೊದಲ ಚಿತ್ರ' ಎಂದಾಗ, 'ಸರಿ ಉತ್ತರ' ಎಂದು ಬಹುಮಾನ ನೀಡಲಾಯಿತು. ಆದರೆ 'ವಂಶವೃಕ್ಷ' ವಿಷ್ಣು ಅಭಿನಯದ ಮೊದಲ ಚಿತ್ರ, ನಾಗರಹಾವು ವಿಷ್ಣು ನಾಯಕ ನಟನಾಗಿ ಅಭಿನಯಿಸಿದ ಮೊದಲ ಚಿತ್ರವೇ ವಿನಃ ಅವರ ಅಭಿನಯದ ಮೊದಲ ಚಿತ್ರವಲ್ಲ.

-ಅಶ್ವಿನಿ ವಿ. ಹೆಗಡೆ, ಬೈರುಂಬೆ

## ಗ್ರಹ ಕುಂಡಲಿಯ ತಪ್ಪು ಮಾಹಿತಿ ಬೇಡ

ಝೀ ಕನ್ನಡ ವಾಹಿನಿಯ 'ಸೂರ್ಯ ಕಾಂತಿ' ಧಾರಾವಾಹಿಯಲ್ಲಿ ಕಾಂತಿ ಮತ್ತು ಸತ್ಯನಿಗೆ ಮದುವೆಯ ನಿಶ್ಚಿತಾರ್ಥಕ್ಕೆ ದಿನ ನಿಗದಿಯಾಗಿದೆ. ಆದರೆ ಮೈಸೂರಿಗೆ ಹೋಗಿದ್ದ ಸತ್ಯ ಸಮಯಕ್ಕೆ ಬಾರದಿದ್ದುದರಿಂದ ಅವನ ದೊಡ್ಡಮ್ಮ ಸತ್ಯನಿಗೆ ಬದಲಾಗಿ ತನ್ನ ಮಗ ಮಂಜುನಾಥನನ್ನು ಹಸೆಯ ಮೇಲೆ ಕುಳಿತುಕೊಳ್ಳಲು ಹೇಳುತ್ತಾರೆ.

ಪುರೋಹಿತರು ಮಂಜುನಾಥನ ನಕ್ಷತ್ರ ಅಶ್ವಿನಿ, ರಾಶಿ ಮಕರ ರಾಶಿ ಅಂತ ಬರೆಯಿರಿ ಎಂದು ತಾಯಿ ಮಗನ ಬಗ್ಗೆ ಹೇಳುತ್ತಾಳೆ. ಆದರೆ ಅಶ್ವಿನಿ ನಕ್ಷತ್ರಕ್ಕೆ ಬರುವುದು ಮೇಷ ರಾಶಿ. ಧನಿಷ್ಠ ಅಥವಾ ಶ್ರಾವಣ ನಕ್ಷತ್ರಕ್ಕೆ ಬರುವುದು ಮಕರ ರಾಶಿ ಎಂದು ಅವರಿಗೆ ಹೇಳಿಕೊಡದೆ ಹೋದದ್ದು ಶೋಚನೀಯ.

ದಯವಿಟ್ಟು ಗ್ರಹ ಕುಂಡಲಿಗಳ ಬಗ್ಗೆ ಪ್ರಸ್ತಾಪ ಮಾಡುವಾಗ ಸರಿಯಾದ ಮಾಹಿತಿಯನ್ನು ತಜ್ಞರ ಹತ್ತಿರ ತೆಗೆದುಕೊಂಡು ಪ್ರಸಾರ ಮಾಡುವುದು ಸೂಕ್ತ.

-ಪುಷ್ಪಾ ಎನ್.ಕೆ. ರಾವ್, ಎರ್ಮಾಳ್, ಉಡುಪಿ

## ಬಹದ್ದೂರು ಗಂಡು ನೆನಪು

'ಮುತ್ತಿನ ತೋರಣ' ಧಾರಾವಾಹಿಯಲ್ಲಿ ಪೂರ್ವಿಯನ್ನು ದಾರಿಗೆ ತರಲು ವಿವೇಕ್ ಅವಳನ್ನು ಮನೆಗೆಲಸದಲ್ಲಿ ತೊಡಗಿಸುವ ಸನ್ನಿವೇಶಗಳು ಶೇಕ್ಸ್‌ಪಿಯರ್‌ನ 'ಟೇಮಿಂಗ್ ಆಫ್ ದಿ ಶ್ರೂ' ಹಾಗೂ ಪರ್ವತವಾಣಿಯವರ 'ಬಹದ್ದೂರ್ ಗಂಡು' ನಾಟಕ ನೆನಪಿಗೆ ತರಿಸುತ್ತವೆ! ಇತ್ತೀಚೆಗೆ ವಿವೇಕ್, ಪೂರ್ವಿಯ ವರ್ತನೆಗಳು ಅತಿರೇಕ ಎನ್ನಿಸುತ್ತದೆ.

-ತರಂಗಿಣಿ, ತುಮಕೂರು

## ದ್ವೇಷ ಸಾಧನೆ ಬೇಡ

ಈ ಟಿವಿಯ 'ಮನೆಯೊಂದು ಮೂರು ಬಾಗಿಲು' ಧಾರಾವಾಹಿಯ ಸಾನಿಕಾ, ಸೋನುರಂತಹವರು ಸುಳ್ಳು ಹೇಳಿ ದ್ವೇಷ ಸಾಧಿಸುವುದಕ್ಕಿಂತ ಅಕ್ಕ ತಂಗಿ ಅನ್ಯೋನ್ಯವಾಗಿ ಬದುಕುತ್ತಿರುವಂತೆ ತೋರಿಸಿದ್ದರೆ ಸರಿ ಇತ್ತು ಎಂಬುದು ನನ್ನ ಅಭಿಪ್ರಾಯ.

-ರುಕ್ಮಿಣಿ ದೇಶಪಾಂಡೆ, ಗೋಕಾಕ

## ಉಪಯುಕ್ತ ಮಾಹಿತಿ

ಅನುಭವದಿಂದ ಮಾಗಿದ ಚತುರ ಅಭಿನಯ ವೀರಣ್ಣ ಪತ್ತಾರ ಅವರದು. ಅವರ ಸಂದರ್ಶನ ಉಪಯುಕ್ತ ಮಾಹಿತಿ ನೀಡಿದೆ.

ಎಚ್.ಆನಂದಕುಮಾರ್, ಚಿತ್ರದುರ್ಗ/ ಕುಬೇರ ಬಡಿಗೇರ, ಗದಗ/ ಎಂ.ಬಿ.ಬಸವರಾಜ, ದಾವಣಗೆರೆ/ ಮಹಾಂತೇಶ ಕಮ್ಮಾರ, ಗುಲ್ಬರ್ಗ

(ಮುಂದಿನ ಪುಟಗಳನ್ನು ನೋಡಿ)